# ಕನ್ನಡ

ಮಾನ್ಯರೆ,

ವರ್ಬೆಟಲ್, ಭಾರತದ ಅತ್ಯಂತ ದೊಡ್ಡ ಚರ್ಚಾವೇದಿಕೆ.
2005ರಲ್ಲಿ ಪ್ರಾರಂಭಗೊಂಡ ಈ ಸಂಸ್ಥೆ ದೇಶದಾದ್ಯಂತ ಎಲ್ಲಾ ವಯೋಮಾನದವರಿಗಾಗಿ ಚರ್ಚಾ ಸ್ಪರ್ಧೆಗಳನ್ನು ನಡೆಸಿದೆ. ತನ್ನ ವಿಶಿಷ್ಟ ಚರ್ಚಾ ನಮೂನೆಗಳ ಮೂಲಕ ವಿಶ್ವದಾದ್ಯಂತ ಇರುವ ಪ್ರಖ್ಯಾತ ಚರ್ಚಾ ಸಂಸ್ಥೆಗಳ ಗಮನ ಸೆಳೆದಿದೆ.
ವರ್ಬೆಟಲ್ ಒಂದು ನೋಂದಾಯಿತ ಲಾಭರಹಿತ ಪ್ರತಿಷ್ಠಾನ. 2005ರಿಂದ ಇಲ್ಲಿಯವರೆಗೆ, ಹತ್ತಾರು ಪ್ರಮುಖ ಇಂಗ್ಲಿಷ್ ಚರ್ಚಾ ಸ್ಪರ್ಧೆಗಳನ್ನು, ಚಿಂತನಾ ಕೂಟಗಳನ್ನು ಏರ್ಪಡಿಸುತ್ತಾ ಬಂದಿರುವ ವರ್ಬೆಟಲ್, ಇತ್ತೀಚಿನ ವರ್ಷಗಳಲ್ಲಿ ಕನ್ನಡ ಭಾಷಿಕ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು, ಅವರಿಗೂ ತರ್ಕಬದ್ಧ ಚರ್ಚೆಯ ಅನುಭವ ನೀಡುತ್ತಿದೆ. ಈ ನಿಟ್ಟಿನಲ್ಲಿ ಕಳೆದ ಎಂಟು ವರ್ಷಗಳಿಂದಲೂ ವರ್ಬೆಟಲ್ ಕನ್ನಡ ಚರ್ಚಾ ಸ್ಪರ್ಧೆ ಏರ್ಪಡಿಸುತ್ತಿದೆ.

ಪ್ರಸಕ್ತ ಸಾಲಿನ ಜುಲೈ 23 ರಿಂದ ಆಗಸ್ಟ್ 18ರ ವರೆಗೆ ಈ ಸ್ಪರ್ಧಾಕೂಟವನ್ನು ಹುಬ್ಬಳ್ಳಿ ಮತ್ತು ಬೆಂಗಳೂರು ಕೇಂದ್ರಗಳಲ್ಲಿ ಆಯೋಜಿಸಲಾಗಿದೆ. ಈ ಚರ್ಚಾ ಸ್ಪರ್ಧೆಯನ್ನು ಐದು ಹಂತಗಳಲ್ಲಿ ಅಂದರೆ, ಪ್ರಾಂತೀಯ ಆಯ್ಕೆ, ರಾಜ್ಯಮಟ್ಟದ ಆಯ್ಕೆ, ಕ್ವಾರ್ಟರ್ ಫೈನಲ್, ಸೆಮಿಫೈನಲ್ ಮತ್ತು ಅಂತಿಮ ಮುಖಾಮುಖಿ ಎಂಬ ವಿವಿಧ ಹಂತಗಳಲ್ಲಿ ಆಯೋಜಿಸಲಾಗಿದೆ. ಪ್ರಾಂತೀಯ ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ಬರಬೇಕಾಗುತ್ತದೆ.

ವರ್ಬೆಟಲ್ ಚರ್ಚಾ ಸ್ಪರ್ಧೆಯ ಮಹತ್ವ ಮತ್ತು ವಿಶಿಷ್ಟತೆಯನ್ನು ಪರಿಗಣಿಸಿ, ತಮ್ಮ ಶಾಲೆಯ ತಂಡಗಳನ್ನು ಸ್ಪರ್ಧೆಯಲ್ಲಿ ಭಾಗವಹಿಸಲು ಕಳಿಸಿಕೊಡಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

## ಚರ್ಚಾಕೂಟದ ವಿವರಗಳು

| | |
|---|---|
| ಕಾರ್ಯಕ್ರಮದ ಹೆಸರು: | ವರ್ಬೆಟಲ್ ಕನ್ನಡ ಚರ್ಚಾ ಸ್ಪರ್ಧೆ |
| ಆಯೋಜಕರು: | ವರ್ಬೆಟಲ್ ಫೌಂಡೇಷನ್ |
| ಕಾರ್ಯಕ್ರಮ ನಡೆಯುವ ಅವಧಿ: | ಜುಲೈ 23 ರಿಂದ ಆಗಸ್ಟ್ 18ರ ವರೆಗೆ |
| ಸ್ಪರ್ಧೆ ನಡೆಯುವ ಕೇಂದ್ರಗಳು ಮತ್ತು ದಿನಾಂಕ: | ಹುಬ್ಬಳ್ಳಿ- 23 ಜುಲೈ, ಬೆಂಗಳೂರು-ಆಗಸ್ಟ್ 10 ರಿಂದ ಆಗಸ್ಟ್ 18. |
| ಸ್ಪರ್ಧಿಗಳ ವಯೋಮಾನ: | 12 -16 ವರ್ಷ ( 7ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳು) |
| ತಂಡಗಳ ವಿವರ: | ಒಂದು ತಂಡದಲ್ಲಿ ಇಬ್ಬರು ಸ್ಪರ್ಧಿಗಳು |
| ಬಹುಮಾನಗಳ ವಿವರ: | ಮೊದಲನೇ ಬಹುಮಾನ ರೂ. 20,000/-<br>ಅಂತಿಮ ಸುತ್ತು ತಲುಪಿದ ಎರಡು ತಂಡಗಳಿಗೆ ತಲಾ ರೂ.5000/-<br>ಮೊದಲನೇ ಬಹುಮಾನ ವಿಜೇತ ತಂಡದ ಮಾರ್ಗದರ್ಶಕ ಶಿಕ್ಷಕರೊಬ್ಬರಿಗೆ ರೂ.5000/- |
| ಪ್ರವೇಶ ಶುಲ್ಕ: | ರೂ 600/- ಪ್ರತಿ ತಂಡಕ್ಕೆ (ಇಬ್ಬರು ಸ್ಪರ್ಧಿಗಳಿಗೂ ಸೇರಿ) |
| ಮಾಧ್ಯಮ: | ಕಾರ್ಯಕ್ರಮದ ಆಯ್ದ ತುಣುಕುಗಳನ್ನು ಯೂಟ್ಯೂಬ್ ವಾಹಿನಿಯಲ್ಲಿ ತೋರಿಸಲಾಗುವುದು. |

ಸ್ಪರ್ಧೆಯ ರೀತಿ ನೀತಿಗಳು ಮತ್ತು ಕ್ರಮಗಳ ಬಗ್ಗೆ ವರ್ಬೆಟಲ್‌ನ ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳಬಹುದು ಅಥವ ಸಂಸ್ಥೆಯಿಂದ ವಿವರಣಾ ಪುಸ್ತಿಕೆಯನ್ನು ಕೇಳಿ ಪಡೆದುಕೊಳ್ಳಬಹುದು, ವರ್ಬೆಟಲ್ ಸಹಾಯವಾಣಿ 9886464641 ಗೆ ಕರೆ ಮಾಡಿ, ಹೆಚ್ಚಿನ ಮಾಹಿತಿ/ನೋಂದಣಿ ಮಾಡಿಕೊಳ್ಳಬಹುದು.

ತಮ್ಮ ವಿಶ್ವಾಸಿ
ವರ್ಬೆಟಲ್ ಪ್ರತಿಷ್ಠಾನದ ಪರವಾಗಿ

ದೀಪಕ್ ತಿಮ್ಮಯ
ಮುಖ್ಯಸ್ಥ

ವರ್ಬೆಟಲ್ ಫೌಂಡೇಶನ್, ನಂ. 808 ಎರಡನೇ ಮಹಡಿ , 18ನೇ ಕ್ರಾಸ್, 9ನೇ ಮೈನ್, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011,
T: +91-80-42511111, Mob: +91 9886464641, E: events@verbattle.com, W: www.verbattle.com